ಕಥೆ

ಸ್ನಾನಮಾಡಿ ಒಂದು ಹಿಡಿ ಭಸ್ಮ ನೆನೆಸಿ ದೇಹಕ್ಕೆ ಪೂರ್ತಿ ಲೇಪಿಸಿ ನಾಮ ಹಾಕಿದ ಬಳಿಕ ಬಿಲ್ವ ಕಟ್ಟೆಯಲ್ಲಿ ದೀಪ ಹಚ್ಚಿಡುವನು. ಅಲ್ಲಿ ನೆಲೆಸಿರುವ ಎಲ್ಲಾ ಮೂರ್ತಿಗಳಿಗೂ ಪ್ರಾಮಾಣಿಕವಾಗಿ ಪ್ರಾರ್ಥನೆ ಸಲ್ಲಿಸುವನು. ಇಷ್ಟು ಮಾಡಿದ ಬಳಿಕವೇ ನಾಣು ಗಂಜಿಯೂಟಕ್ಕೆ ಕುಳಿತುಕೊಳ್ಳುವನು.

ಅಲ್ಲಿ ದೀಪದಿಂದ ಪ್ರಾರ್ಥನೆ ಮಾಡಲಾರಂಭಿಸಿದ ಬಳಿಕವೇ ನಾಣುವಿನ ಆರ್ಥಿಕ ಸ್ಥಿತಿ ಸುಧಾರಿಸಿತೆಂಬುದು ಆತನ ಬಲವಾದ ನಂಬಿಕೆ. ನಾಣುವಿನ ತಂದೆಯ ಕಾಲಕ್ಕೆ ಅವನ ಪರಿಸ್ಥಿತಿ ತೀರಾ ದಯನೀಯವಾಗಿತ್ತು. ಜೀರ್ಣಗೊಂಡು ಗಾಳಿಗೆ ನಡುನಡುಗುತ್ತ ನಿಂತಿದ್ದ ಒಂದು ಓಲೆಗರಿಯ ಗುಡಿಸಲು ಮಾತ್ರವೇ ಅಂದು ಅವನಿಗಿದ್ದುದು. ಅರೆ ಹೊಟ್ಟೆ ತುಂಬಿಸಿಕೊಳ್ಳುವುದೇ ಅಂದು ಕಷ್ಟಕರವಾಗಿತ್ತು.

ಆ ಕಾಲದಲ್ಲಿಯೇ ಅಲ್ಲಿ ಬಿಲ್ವಪತ್ರೆ ಗಿಡ ಮೊಳೆತುದು. ಅಂಗಳದಲ್ಲಿ ಬಿಲ್ವಪತ್ರೆ ಹುಟ್ಟಿದುದು. ಅದೂ ಕಲ್ಲು ತುಂಬಿದ ಅಂಗಳದಲ್ಲಿ ಅದರಲ್ಲೊಂದು ವಿಶೇಷತೆಯಿದೆಯೆಂದು ವೇಲು-ನಾಣುವಿನ ತಂದೆಗೆ ಅನ್ನಿಸಿತ್ತು. ಯಾರೂ ಬೀಜ ಹಾಕದೆಯೇ ಅದು ಮೊಳೆತುದು. ಬಿಲ್ವಪತ್ರೆ ಪವಿತ್ರ ಮರ. ಎಲೆಗಳು ಮೂರು ಮೂರು ಸೇರಿಕೊಂಡಿರುವುದಲ್ಲವೇ? ಪರಶಿವನ ಕಣ್ಣುಗಳೂ ಮೂರು. ಶಿವಪೂಜೆಗೆ ಅತ್ಯಂತ ವಿಶೇಷವಾಗಿ ಬಳಸುವುದೂ ಬಿಲ್ವದ ಎಲೆಗಳನ್ನೆ. ವೇಲುವಿನ ನಿರ್ದೇಶನ ಪ್ರಕಾರ ಬಿಲ್ವಕಟ್ಟೆಯಲ್ಲಿ ಒಂದು ಬತ್ತಿ ಉರಿಸಿಡಲು ಆರಂಭಿಸಲಾಯಿತು.

ಕೆಲಸವೇನೂ ಇಲ್ಲದೆ ಅಂಡಲೆಯುತ್ತಿದ್ದ ದೊಡ್ಡಮಗ ಸೈನ್ಯಕ್ಕೆ ಸೇರಿದ. ನಾಣುವಿನ ಅಣ್ಣ ಕರುಪ್ಪನಿಂದ ವೇಲುವಿನ ಹೆಸರಿಗೆ ಮನಿಯಾರ್ಡರ್ ಆಗಿ ಒಂದು ಸಣ್ಣ ಮೊತ್ತ ಎಲ್ಲಾ ತಿಂಗಳಲ್ಲೂ ಬರಲಾರಂಭಿಸಿತು. ಕುಟುಂಬದ ಸ್ಥಿತಿ ಸುಧಾರಿಸತೊಡಗಿತು.

ವೇಲು ನಾಣುವನ್ನು ಕರೆದು ಹೇಳಿದ:

'ನೋಡಿದೆಯೇನೋ... ನಮಗೆ ಒಳ್ಳೆಯದಾಗುವ ಕಾಲ. ಆ ಬಿಲ್ವಪತ್ರೆ ಗಿಡ ಮೊಳೆತಾಗಲೇ ನಾನು ಯೋಚಿಸಿದ್ದೆ...'

ನಾಲ್ಕು ವರ್ಷಗಳಲ್ಲಿ ಅಲ್ಲಿ ಹಲವು ಬದಲಾವಣೆಗಳು ಆದವು. ಓಲೆಗರಿಯ ಗುಡಿಸಲಿಗೆ ಬದಲಾಗಿ ಒಂದು ಬೈಹುಲ್ಲಿನ ಮನೆ ರೂಪ ಪಡೆಯಿತು. ಹತ್ತಿಪ್ಪತ್ತು ತೆಂಗಿನ ಮರಗಳಿರುವ ಸಣ್ಣ ಹಿತ್ತಿಲೊಂದನ್ನು ಖರೀದಿಸಿದ್ದಾಯಿತು. ಬಿಲ್ವಪತ್ರೆ ಗಿಡಕ್ಕೆ ಒಂದು ಕಟ್ಟೆ ನಿರ್ಮಿಸಲು ವೇಲು ಮರೆಯಲಿಲ್ಲ. ಅಲ್ಲಿ ಹಚ್ಚಿಡಲು ಒಂದು ಚಿಕ್ಕದೀಪವನ್ನು ಖರೀದಿಸಿದ.

ಐದು ಬತ್ತಿಗಳನ್ನು ಇರಿಸಿ ಹಚ್ಚಿಡುತ್ತಿದ್ದ ಆ ಸಣ್ಣ ದೀಪವನ್ನು ವೇಲುವಲ್ಲದೆ ಬೇರಾರೂ ತೆಗೆದುದಿಲ್ಲ. ಬೇರಾರಾದರೂ ನಿರ್ಲಕ್ಷ್ಯದಿಂದ ಕೆಳಗೆ ಬೀಳಿಸಿ ಒಡೆದು ಹಾಕಿದರೋ ಎಂಬುದು ವೇಲುವಿಗಿದ್ದ ಭಯ.

ಸೈನಿಕನ ಹಣವೂ ಪತ್ರವೂ ಬರಲಿಲ್ಲ. ಒಂದು ದಿನ ವೇಲುವಿಗೆ ಒಂದು ತಂತಿ ಬಂತು. ಕರುಪ್ಪ ಆಸ್ಪತ್ರೆಯಲ್ಲಿ ತೀರಿಕೊಂಡಿದ್ದಾನೆಂದು...

ಎಪ್ಪತ್ತನೆಯ ವರ್ಷಕ್ಕೆ ವೇಲು ತೀರಿಕೊಂಡ. ರೋಗಿ ಕೊನೆಯದಾಗಿ ಮಗನಲ್ಲಿ ಕೇಳಿಕೊಂಡುದು ಬಿಲ್ವ ಕಟ್ಟೆಯಲ್ಲಿ ಮುಂದೆಯೂ ಭಕ್ತಿಯಿಂದ ಬೇಕಾದ ಎಲ್ಲಾ ಕೆಲಸಗಳನ್ನು ಮಾಡಬೇಕು ಎಂಬುದೇ ಆಗಿತ್ತು.

ನಾಣು ಒಬ್ಬ ಕೂಲಿ ಕೆಲಸಗಾರ. ಸಿಗುವ ಒಂಬತ್ತಾಣೆ ಕೂಲಿಯಲ್ಲಿ ಒಂದೂವರೆ ಆಣೆಗೆ ಎಣ್ಣೆ ಖರೀದಿಸಲು ಅವನಿಗೆ ಹಿಂಜರಿಕೆಯಿಲ್ಲ. ಮಗ ಆಮುರ್ಗನ್ ಕೆಲವೊಮ್ಮೆ ಪಿರುಗುಟ್ಟುವನು. ಅದನ್ನು ಕೇಳಿಕೊಂಡಾಗ ನಾಣುವಿಗೆ ಕೋಪ ಬರುತ್ತದೆ.

'ಗುಟುಕು ನೀರು ಕುಡಿಯುವಂತಾದುದು ಅದರ ಕಾರಣದಿಂದ... ಅದಕ್ಕೆ ಎರಡು ಮುಕ್ಕಾಲು ಖರ್ಚುಮಾಡುವಾಗ... ಯಾಕೆ ಹೇಳ್ಬೇಕು? ನಿಮ್ಮ ಕಾಲಕ್ಕೆ ಅದಾವುದೂ ಇರಲಾರದು. ಈಗಲೇ ಕಾಣುತ್ತದಲ್ಲ?'

ನಾಣು ಇವತ್ತು ಒಬ್ಬ ದುರದೃಷ್ಟಶಾಲಿ. ಐದು ಜನರಿರುವ ಕುಟುಂಬ ಪೋಷಣೆಗೆ ಅವನು ಬೇಕು. ಸುಖವಾಗಿ ಕಳೆದ ದಿನಗಳು ತುಂಬಾ ಹಿಂದಕ್ಕುಳಿದವು...

ಕಷ್ಟಪಾಡುಗಳ ನಡುವೆ ನಜ್ಜುಗುಜ್ಜಾಗಿರುವಾಗಲೂ ನಾಣುವಿನ ಮನಸ್ಸು ಸಂತೃಪ್ತಿಯಿಂದಿತ್ತು. ಅವನು ದೀಪವಿಟ್ಟು ಆರಾಧಿಸುವ ಮೂರ್ತಿಗಳು ಅವನ ಕೈಬಿಡಲಾರವು ಎಂಬುದು ನಾಣುವಿನ ಬಲವಾದ ನಂಬಿಕೆ. ಒಳ್ಳೆಯ ಕಾಲ ಇನ್ನೂ ಬರಲಾರದೆಂದು ಕಂಡವರಾರು? ಅದೃಶ್ಯ ಶಕ್ತಿಗಳು ಮನಸ್ಸು ಮಾಡಿದರೆ ಅದೂ, ಅದರಾಚೆಗಿನದೂ ಸಾಧ್ಯವಾದೀತು...!